ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

ಸಿ.ಸಿ ನಂ. **6164/2024**

ಚಾಸಾಃ 3
ಪ್ರಾಸಾಃ 3

ದಿನಾಂಕಃ **28-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಹೊನ್ನಪ್ಪ |
| ತಂದೆಯ/ಗಂಡನ ಹೆಸರು | ನಿಂಗಪ್ಪ |
| ವಯಸ್ಸು | 50 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | ಎ. ಮಂಜುನಾಥ ನಗರ |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

**1** ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. **2** ನೇ ಅರೋಪಿಯ ಪರಿಚಯ ನನಗೆ ಇಲ್ಲ ಎನ್ನುತ್ತಾರೆ. ಚಾಸಾ-**1 , 2** ಮತ್ತು **4** ರವರ ಪರಿಚಯ ನನಗೆ ಇದೆ.

ದಿಃ**30-07-2021** ರಂದು ನಾನು ತಿಪಟೂರಿನಿದಿಂದ ದಸರೀಪಸಿ,ಟ್ಟ ದೇವಾಲಯಕ್ಕೆ ಬೆಳಗ್ಗೆ **11-45** ರ ಸಮಯದಲ್ಲಿ ದಸರೀಘಟ್ಟ **-** ತಿಪಟೂರು ರಸ್ತೆಯಲ್ಲಿ ಹೋಗುತ್ತಿರುವಾಗ ಮಲ್ಲೇದೇವರಹಳ್ಳಿ ಗೇಟ್ ಬಳಿ ರಸ್ತೆಯ ಬೈಕ್ ನಲ್ಲಿಹೋಗುತ್ತಿದ್ದಾಗ ನನ್ನ ಮುಂದೆ ದಸರೀಘಟ್ಟ ಕಡೆಯಿಂದ ತಿಪಟೂರು ಕಡೆಗೆ ಬಿದೆರೆಕಾವಲ್ ನ ವಾಸಿಯಾದ ಚಾಸಾ-**1** ರವರು ಹೊಗುತ್ತಿರುವಾಗ **KA-17-S-5789** ನೇ ಬೈಕಿನಲ್ಲಿ ಚಾಸಾ-**2** ರವರನ್ನು ಕೂರಿಸಿಕೊಡು ಬರುತ್ತಿರುವಾಗ ಮಲ್ಲದೇವಹಳ್ಳಿ ಕಡೆಯಿಂದ ಒಂದು ಟ್ರಾಕ್ಟರ್ ಚಾಲಕ ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಡು ಬಂದು ದಸರೀಘಟ್ಟದ ಕಡೆಗೆ ಯಾವುದೇಮೂನ್ಸೂಚನೆ ಇಲ್ಲದೇ ತಿರುಗಿಸಿದಾಗ ಚಾಸಾ**1** ರವರ ಬೈಕ್ ಗೆ ಡಿಕ್ಕಿ ಹೊಡೆದು ಚಾಸಾ-**1** ಮತ್ತು **2** ಇಬ್ಬರು ನೆಲ್ಲಕ್ಕೆ ಬಿದ್ದರು. ಅಗ ನಾನು ಗಾಡಿಯನ್ನು ನಿಲ್ಲಿಸಿ

ಹೋಗಿ ನೋಡಿದಾಗ ಇಬ್ಬರಿಗೂ ಏಟು ಬಿದ್ದಿತ್ತು. ಚಾಸಾ-2 ರವರಿಗೆ ಎಡಗಾಲು ಪೂರ್ತಿ ಮರಿದಿತ್ತು, ಚಾಸಾ-1 ರವರ ಮಂಡಿ ಏಟು ಬಿದ್ದಿತ್ತು. ಸದರಿ ಟ್ರಾಕ್ಟರನ್ನು ನೋಡಲಾಗಿ ಅದು ಎಎಲ್ಸ್‌ಟಿ ಹಣ ಬಣ್ಣದ ಟ್ರಾಕ್ಟರ್ ಆಗಿತ್ತು. ಟ್ರಾಕ್ಟರ್ ಇಂಜಿನ್ ಹಾಗೂ ಟ್ರೇಲರ್ ಮೇಲೆ ನೊಂದಣಿ ಸಂಖ್ಯೆ ಇರಲಿಲ್ಲ. ಅಷ್ಟರಲ್ಲಿ ಟ್ರಾಕ್ಟರ್ ನ ಚಾಲಕ ಗಾಡಿಯಿಂದ ಇಳಿದು ಗಾಯಾಳುಗಳನ್ನು ಉಪಚರಿಸದೇ ಓಡಿ ಹೋಗಿರುತ್ತಾರೆ. ನಂತರ ಸ್ಥಳಕ್ಕೆ ಬಂದ ಚಾಸಾ-4 ಮತ್ತು ನಾನು 108 ಅಂಬುಲೆನ್ಸ್ ಗೆ ಕರೆ ಮಾಡಿ ಗಾಯಾಳುಗಳನ್ನು ತಿಪಟೂರಿನ ಸರ್ಕಾರಿ ಆಸ್ಪತೆರಗೆ ಕರೆದುಕೊಂಡು ಹೋಗಿರುತ್ತೇನೆ. 1 ನೇ ಆರೋಪಿಯನ್ನು ಸಾಕ್ಷಿ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ.

ದಿಃ 05-08-2021 ರಂದು ಪೋಲಿಸರು ಹಾಗೂ ಚಾಸಾ-11 ರವರು ಘಟನಾ ಸ್ಥಳಕ್ಕೆ ಹೋಗಿ 11.30 ರಿಂದ 12.30 ರ ವರೆಗೆ ಚಾಸಾ-5 , 6 ಮತ್ತು ನನ್ನ ಸಮಕ್ಷಮ ಮಹಜರು ಜರುಗಿಸಿರುತ್ತಾರೆ. ಸಾಕ್ಷಿಯು ಒಂದು ದಾಖಲೆಯ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಸ್ಥಳ ಪಂಚನಾಮೆ ಆಗಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ಪ್ರಕರಣಕ್ಕೆ ಸಂಬಂದಪಟ್ಟ ಟ್ರಾಕ್ಟರನ್ನು ದಿಃ05-08-2021 ರಂದು ತಿಪಟೂರು ಗ್ರಾಮಾಂತರ ಪೋಲಿಸ್ ಠಾಣಾ ಆವರಣದಲ್ಲಿ ಅಮಾನತ್ತು ಪಂಚನಾಮೇಯನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಜರುಗಿಸಿದ ಸಮಯದಲ್ಲಿ ನನ್ನ ಜೊತೆ ಚಾಸಾ-7 ಮತ್ತು 10 ರವರು ಇದ್ದರು. ಸಾಕ್ಷಿಯು ಒಂದು ದಾಖಲೆಯ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಅಮಾನತ್ತು ಪಂಚನಾಮೆ ಆಗಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಎಂ ಕೆ ವೈ ವಕೀಲರಿಂದಃ

ನಾನು ಟಿ. ಎಂ. ಮಂಜುನಾಥ ನಗರದ ನಿವಾಸಿ. ಚಾಸಾ-1 ಮತ್ತು 2 ರವರು ನನ್ನ ಪರಿಚಯಸ್ಥರು ಅವರು ನನಗೆ ಸುಮಾರು 7-8 ವರ್ಷಗಳಿಂದ ಪರಿಚಯ ಇದ್ದಾರೆ. ನಾನು ನನ್ನ ಸ್ಕೂಟಿ ಸಂಖೆ ಕೆಎ-44-ಇಎ-3660 ಯಲ್ಲಿ ದಸರೀಘಟ್ಟದ ಚೌಡೇಶ್ವರಿ ದೇವಸ್ಥಾನಕ್ಕೆ ಹೋಗುತ್ತಿದ್ದೆ. ಚಾಸಾ-1 ಮತ್ತು 2 ರವರು ಹೋಗುತ್ತಿದ್ದಂತಹ ವಾಹನವನ್ನುಯಾರೂ ಚಾಲನೆ ಮಾಡುತ್ತಿದ್ದರು ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ನಾನು ಸುಮಾರು 11.45 ಗಂಟೆ ಸಮಯದಲ್ಲಿ ದೇವಸ್ಥಾನಕ್ಕೆ ಹೋಗುತ್ತಿದ್ದೆ. ಘಟನಾ ಸ್ಥಳದಿಂದ ದಸರೀಘಟ್ಟಕ್ಕೆ ಸುಮಾರು 2 ರಿಂದ 3 ಕಿ ಮಿ ಅಂತರ ಇತ್ತು. ನಾನು ಹೋಗುತ್ತಿರುವ ರಸ್ತೆಯು ಸಂಚಾರಕ್ಕೆ ಸುಗುಮವಾಗಿ ಇರಲಿಲ್ಲ ಎಂದರೆ

ಸರಿ . ನಾನು ದಸರೀಘಟ್ಟಕ್ಕೆ ಕೆರೆಗೋಡಿ ರಸ್ತೆಯ ಮುಖಾಂತರ ಹೋಗಿರುತ್ತೇನೆ. ನಾನು ದಸರೀಘಟ್ಟಕ್ಕೆ ಹೋಗುವ ರಸ್ತೆಯಲ್ಲಿ ಮೊದಲು ಅನಗನಹಳ್ಳಿ , ಹಿಪ್ಪೆತೋಪು, ಆಶಾ ಫ್ಯಾಕ್ಟರಿ ಸಿಗುತ್ತದೆ ಎಂದರೆ ಸರಿ . ಸದರಿ ರಸ್ತೆಯಲ್ಲಿ ಲೀಲಾ ಪ್ಯಾಲೇಸ್ ಮುಂತಾದವುಗಳು ಇದ್ದಾವೆ ಎಂದರೆ ಅದು ನನಗೆ ಗೊತ್ತಿಲ್ಲ. ಸದರಿ ರಸ್ತೆಯಲ್ಲಿ ಹೋದರೆ ಎಡಕ್ಕೆ ಲೀಲಾಪ್ಯಾಲೇಸ್, ಬಲಕ್ಕೆ ಜಿ.ಕೆ. ಲೇ ಔಟ್ ಹಾಗೂ ಎಡಭಾಗದಿಂದ ಮುಂದಕ್ಕೆ ಹೋದರೆ ಇಟ್ಟಿಗೆ ಫ್ಯಾಕ್ಟರಿ ಸಿಗುತ್ತದೆ ಎಂದರೆ ಸರಿ . ದರ್ಮಸ್ಥಳ ಮಂಜುನಾಥ ಸ್ವಾಮಿ ಅನಗನ ಹಳ್ಳಿಯ ಕೆರೇಯನ್ನು ಪುನರ್ ಅಭಿವೃದ್ದಿ ಮಾಡುವುದಕ್ಕೆ ಅಡಾಪ್ಟ ಮಾಡಿಕೊಡು ಅದರಲ್ಲಿ ಇರುವಂತಹ ಮಣ್ಣನ್ನು ತೆಗೆದು ಹಾಕುತ್ತಿದ್ದರು ಎಂದರೆ ಸ ರಿ . ಅ ರಸ್ತೆಯ ಅಕ್ಕಪಕ್ಕದಲ್ಲಿ ಹಲವಾರು ಡೈರಿಗಳು, ಫ್ಯಾಕ್ಟರಿ, ದೇವಸ್ಥಾನ ಹಾಗೂ ಮನೆಗಳು ಇವೆ ಎಂದರೆ ಸರಿ . ಆದ್ದರಿಂದ ಸದರಿ ರಸ್ತೆಯಲ್ಲಿ ವಾಹನ ಸಂಚಾಲನೆ ಪ್ರತಿ ನಿತ್ಯ ಇರುತ್ತದೆ ಎಂದರೆ ಸ ರಿ . ಆ ರಸ್ತೆಯಲ್ಲಿ ಜನಸಂದಣಿ ಇತ್ತು ಎಂದರೆ ಸರಿಯಲ್ಲ. ಇತ್ತು ಅದರೆ ಅದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಆ ರಸ್ತೆಯಲ್ಲಿ ಸಿ.ಸಿ. ಕ್ಯಾಮೆರಾ ಅಳವಡಿಸಿದ್ದಾರೋ ಇಲ್ಲವ್ರೂ ೀ ನನಗೆ ಗೊತ್ತಿಲ್ಲ. ಅಪಘಾತ ಮಾಡಿರುವಂತಹ ಟ್ರಾಕ್ಟರ್ ದೇವರಹಳ್ಳಿ ಕಡೆಯಿಂದ ಬಂದಿರುತ್ತದೆ. ನಾನು ಅದನ್ನು ಸುಮಾರು **20** ಅಡಿ ಅಂತರದಲ್ಲಿ ನೋಡಿರುತ್ತೇನೆ. ಸದರಿ ರಸ್ತೆ ಒಂದು ಕಾಡು ಪ್ರದೇಶದಂತೆ ಕಾಣುತ್ತದೆ ಎಂದರೆ ಸ ರಿ. ಅದೇ ರಸ್ತೆಯಲ್ಲಿ ಟ್ರಂಚ್ ಗಳು ಹಾಗೂ ರಸ್ತೆಯನ್ನು ಅಗೆದಿದ್ದರು ಎಂದರೇ ಸಾಕ್ಷಿ ಅದುನ್ನು ಜಲ್ಲಿಗಳಿಂದ ಮುಚ್ಚಿದ್ದರು ಆದರೆ ಟಾರ್ ಹಾಕಿದ್ದರೋ ಇಲ್ಲವ್ರೂ ೀ ಗಮನಿಸಲಿಲ್ಲ. ಅದೇ ರೀತಿ ಜಲಜೀವನ್ ಸ್ಕೀಮ್ ಸಹ ನೆಡೆಯುತ್ತಿತು ಎಂದರೆ ನನಗೆ ಅದು ಗೊತ್ತಿಲ್ಲ. ಅದೇ ರೀತಿ ಹೇಮಾವತಿ ಚಾನಲ್ ನಿಂದ ಕುಡಿಯುವ ನೀರನ್ನು ಡಂಪ್ ಮಾಡುವುದಕ್ಕೆ ಪೈಪುಗಳನ್ನು ಅಳವಡಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ರೈತರು ತರಕಾರಿಯನ್ನು ಬೆಳೆಯಲು ರಸ್ತೆಯ ಎರಡೂ ಭಾಗದಲ್ಲಿ ತರಕಾರಿಗಳನ್ನು ಬೆಳೆದಿದ್ದರು ಎಂದರೆ ಸ ರಿ . ಅದನ್ನು ನಾನು ಗಮನಿಸುತಿರುತ್ತೇನೆ.

ಅಪಘಾತಕ್ಕೆ ಸಂಬಂದಪಟ್ಟಿರುವ ಟ್ರಾಕ್ಟರ್ ನ ಇಂಡಿಕೇಟರ್ ಗಳನ್ನು ಹಾಕಿತ್ತೋ ಇಲ್ಲವ್ರೂ ೀ ನಾನು ನೋಡಿರುವುದಿಲ್ಲ. ಸದರಿ ಟ್ರಾಕ್ಟರ್ ಮಣ್ಣನ್ನು ತುಂಬಿಕೊಂಡು ಬರುತ್ತಿತ್ತು. ಸದರಿ ಟ್ರಾಕ್ಟರಿನಲ್ಲಿ ಮಣ್ಣನ್ನು ಜೆಸಿಬಿಯಿಂದ ತುಂಬಿರುವಷ್ಟು ಸವಾರಿಯಂತೆ ಇತ್ತು. ಆ ಟ್ರಾಕ್ಟರಿಗೆ ಟಾಪ್ ಇರಲಿಲ್ಲ. ಪೋಲಿಸರು ಮಹಜರನ್ನು ಜರುಗಿಸುವ ಮುಂಚಿತವಾಗಿ ನನಗೆ ಘಟನೆಯಾದ 2 ರಿಂದ 3 ದಿನಕ್ಕೆ ನೋಟೀಸನ್ನು ಜಾರೀಮಾಡಿದ್ದರು. ಸದರಿ ನೋಟೀಸನ್ನು ನನಗೆ ಪೋಲಿಸ್ ಠಾಣೆಗೆ ಕರೆಸಿ ನೀಡಿರುತ್ತಾರೆ. ನಿಪಿ.2 ಮತ್ತು 3 ನ್ನು ಯಾರೂ ಬೆರಳಚ್ಚು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಹಾಗೂ ಅದರಲ್ಲಿ ಏನು ಬರೆದಿದ್ದಾರೆ ಎಂಬುದರ ಮಾಹಿತಿ ನನಗೆ ಇದೆ. ನಿಪಿ.2 ಮತ್ತು 3 ಕ್ಕೆ ನಾನು ಪೋಲಿಸ್ ಠಾಣೆಯಲ್ಲಿ ನೋಟೀಸನ್ನು ಜಾರಿ ಮಾಡಿದಂತಹ ಸಮಯದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ . ಚಾಸಾ-1 ಮತ್ತು 2 ರವರು ನನಗೆ 7-8 ವರ್ಷಗಳಿಂದ ಪರಿಚಯ ಇರುವ ಕಾರಣ ಅವರ ಮಾತು ಕೇಳಿ

ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಮತುತ 2 ರವರು ಮಧ್ಯಪಾನ ಸೇವನೆ ಮಾಡಿಕೊಂಡು ಬರುವಾಗ ಅಪಘಾತ ಅವರ ತಪ್ಪಿನಿಂದ ಬಿದ್ದು ಆಗಿರುತ್ತದೆ ಅದು ಸಿ.ಸಿ. ಕ್ಯಾಮೆರಾದಲ್ಲಿ ಸೆರೆಯಾಗಿರುತ್ತದೆ ಎಂದರೆ ಸರಿಯಲ್ಲ. ಅವರ ವಿಶ್ವಾಸದ ಮೇರೆಗೆ ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನವು ಒಂದೇಜನಾಂಗದವರು ಎಂದರೆ ಸರಿ . ಆದರೆ ಸಂಬಂದಿಗಳಲ್ಲ. ಚಾಸಾ-4 ರವರು ಹಾಗೂ ನಾನು ಈ ದಿನ ನ್ಯಾಯಾಲಯಕ್ಕೆ ಒಟ್ಟಿಗೆ ಬಂದಿರುವುದಿಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.